ಪಾಠ–9 ಆಗಸ್ಟ್ 24–30

# ಹೊಸ ಒಡಂಬಡಿಕೆಯ ಕಾಲದ ಸಭೆಯಲ್ಲಿ ಸುವಾರ್ತಾ ಸೇವೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಅ.ಕೃ 2:42–47, 4:32–37, ಮತ್ತಾಯ 25:38,40 ಮತ್ತು ಅ.ಕೃ. 9:36 ಮತ್ತು 2 ಕೊರಿಂಥ 8:7–15 ಮತ್ತು ರೋಮ 12 ಮತ್ತು ಯಾಕೋಬ 2:1–9.

**ಸ್ಮರಣವಾಕ್ಯ : "ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವುದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ, ನಿರ್ಮಲವೂ ಆಗಿರುವ ಭಕ್ತಿ– ಯಾಕೋಬ 1:27.**

ಕನಿಷ್ಟ ಕ್ರೈಸ್ತರಿಗಾದರೂ ಸತ್ಯವೇದದಲ್ಲಿ "ಮಹಾ ಆದೇಶ"ವನ್ನು ಚೆನ್ನಾಗಿ ತಿಳಿಸುವ ವಾಕ್ಯಗಳು ಮತ್ತಾಯ 28:18–20 ಆಗಿದೆ. ಈ ಪಾಠವು ಅನೇಕ ಸಲ ಬಣ್ಣಿಸಲ್ಪಡುತ್ತದೆ ಮತ್ತು ಎಲ್ಲಾ ತರಹದ ಧರ್ಮಪ್ರಸಾರ ಮತ್ತು ಸೌವಾರ್ತಿಕ ಯೋಜನೆಗಳಿಗೆ ಸ್ಫೂರ್ತಿದಾಯಕವಾದ ಆದೇಶವಾಗಿದೆ. ದಿಟವಾಗಿ ಕ್ರೈಸ್ತರು ಈ ಆದೇಶದಿಂದ ಉತ್ತೇಜಿತರಾಗಿ ಲೋಕದ ಎಲ್ಲಾ ದೇಶಿಗಳಿಗೆ ಹೋಗಿದ್ದಾರೆ. ಕೆಲವು ಸಲ ಸುವಾರ್ತೆಯನ್ನು ಸಾರುವ ಸಲುವಾಗಿ ವೈಯಕ್ತಿಕವಾಗಿ ದೊಡ್ಡ ಬೆಲೆಯನ್ನು ತೆತ್ತಿದ್ದಾರೆ.

ಯೇಸುಕ್ರಿಸ್ತನು ಈ ಮಹಾ ಆದೇಶದಲ್ಲಿ ಏನನ್ನು ಹೇಳುತ್ತಾನೆ? ಶಿಷ್ಯರನ್ನಾಗಿ ಮಾಡುವುದಕ್ಕೆ ದೀಕ್ಷಾಸ್ನಾನ ಕೊಡುವುದಕ್ಕೆ ಮತ್ತು ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ (ಮತ್ತಾಯ 28:20) ಎಂದು ಹೇಳಿದನು. ಯೇಸುಕ್ರಿಸ್ತನು ನಮಗೆ ಏನನ್ನು ಆದೇಶ ಮಾಡಿದ್ದಾನೋ ಅದು ಬಹಳಷ್ಟು ಕೊರತೆಯುಳ್ಳವರನ್ನು ನೊಂದವರ ಮತ್ತು ತಮ್ಮನ್ನು ತಾವು ನೋಡಿಕೊಳ್ಳಲಾರದವರನ್ನು ಕುರಿತು ಚಿಂತಿಸಬೇಕೆಂದು

ಹೇಳುತ್ತದೆ; ಹಾಗಿರಲಾಗಿ ಯೇಸುಕ್ರಿಸ್ತನ ಆದೇಶವು ಶಿಷ್ಯರಿಗೆ ಹೊಸದೇನನ್ನು ಮಾಡಲು ಹೇಳುವುದಿಲ್ಲ, ಆದರೆ ಕ್ರಿಸ್ತನು ಈಗಾಗಲೇ ಆರಂಭ ಮಾಡಿದ್ದ ಸೇವೆಯನ್ನು ಮುಂದುವರೆಸಿಕೊಂಡು ಹೋಗಬೇಕಾಗಿತ್ತೆಂಬುದನ್ನು ನಾವು ನೆನಪು ಮಾಡಿಕೊಳ್ಳಬಹುದು.

ಕ್ರಿಸ್ತನ ಬೋಧನಾಂಶಗಳು ಹೊಸಸಭೆಯ ಸಮುದಾಯದವರ ಜೀವಿತದಲ್ಲಿ ಈ ಮಹಾ ಆದೇಶವು ನೆರವೇರಿದ್ದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ.

ಈ ವಾರದ ಪಾಠವನ್ನು ಆಗಸ್ಟ್ 31ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳುವುದಕ್ಕೆ ಅಧ್ಯಯನ ಮಾಡಿರಿ.

**ಭಾನುವಾರ** **ಆಗಸ್ಟ್ 25**

## ಒಂದು ಹೊಸ ಬಗೆಯ ಸಮುದಾಯ

ಯೇಸುಕ್ರಿಸ್ತನ ಆರೋಹಣದ ನಂತರ ಪಂಚಾಶತ್ತಮ ದಿನದಲ್ಲಿ ಪವಿತ್ರಾತ್ಮನು ಬಂದದ್ದರಿಂದ ವಿಶ್ವಾಸಿಗಳ ಒಂದು ಗುಂಪು ವೇಗವಾಗಿ ಬೆಳೆದು ಆದಿಸಭೆಯನ್ನು ಸೃಷ್ಟಿಸಿತು, ಕ್ರಿಸ್ತನು ಅನುಯಾಯಿಗಳ ಹೊಸ ಬಗೆಯ ಈ ಸಮುದಾಯವು ಆತನ ಅಸಲೀ (ನೇರವಾಗಿ) ಶಿಷ್ಯರಿಂದ ನಡೆಸಲ್ಪಟ್ಟಿತು. ಈ ಹೊಸಸಮುದಾಯವು ತಮ್ಮಷ್ಟಕ್ಕೆ ತಾವೇ ಸೇರಿ ಮಾಡಿಕೊಂಡದ್ದಲ್ಲ. ಆದರೆ ಇದು ಯೇಸುಕ್ರಿಸ್ತನ ಬೋಧನೆ ಮತ್ತು ಸುವಾರ್ತಾ ಸೇವೆಯ ಮೇಲೆ ಕಟ್ಟಲ್ಪಟ್ಟು ಯೆಹೂದ್ಯರ ಪರಿಶುದ್ಧ ಶಾಸ್ತ್ರ ಮತ್ತು ಪ್ರವಾದಿಗಳ ದೀರ್ಘಚರಿತ್ರೆಯಲ್ಲಿ ಬರೆಯಲ್ಪಟ್ಟದ್ದಾಗಿತ್ತು.

ಅ.ಕೃ. 2:42–7 ಮತ್ತು 4:32–37ನ್ನು ಓದಿರಿ. ಆದಿಸಭೆಯ ವಿವರಣೆಯಲ್ಲಿ ಮುಖ್ಯಮೂಲಾಂಶಗಳೆಂದು ಯಾವುದನ್ನು ಗುರುತಿಸುತ್ತೀರಿ?

ಇಸ್ರಾಯೇಲ್ಯರು ಪೂರ್ಣವಾದ, ಉದಾರವಾದ ಬಾಳ್ವೆಯನ್ನು ವೇದದ ನೀಲಿ ನಕ್ಷೆಯಂತೆ ಮಾಡುವುದಕ್ಕಾಗದೆ ಎಂದೆಂದಿಗೂ ವಿಫಲರಾದವರಂತೆ ಕಾಣುತ್ತಾರೆ. ಆದರೆ ಆದಿಸಭೆಯು ಧರ್ಮೋಪದೇಶಕಾಂಡ 15:4ರಲ್ಲಿ ನಿಮ್ಮಲ್ಲಿ ಬಡವರಿರಬಾರದೆಂಬ ಅಪ್ಪಣೆಯನ್ನು ಗಂಭೀರವಾದ ತೆಗೆದುಕೊಂಡಿತು.

ತಮ್ಮ ನಂಬಿಕೆಯನ್ನು ನಿಜವಾಗಿ ವ್ಯಕ್ತಮಾಡುವುದಕ್ಕೆ ತಮ್ಮ ಭೌತಿಕ ವಸ್ತುಗಳನ್ನು (ಆಸ್ತಿಪಾಸ್ತಿ) ಮಾರಿ ಬಂದ ಹಣವನ್ನು ಸಮಾನವಾಗಿ ಜೊತೆವಿಶ್ವಾಸಿಗಳೆಲ್ಲರೂ ಹಂಚಿಕೊಂಡು ಜೀವಿಸುತ್ತಿದ್ದರು (ಅ.ಕೃ. 4:34–5:2ನ್ನು ಓದಿರಿ).

ಆದಾಗ್ಯೂ ಈ ಸಮುದಾಯವು ಯಾವುದೇ ಕೊರತೆಯಿಲ್ಲದ ಕಲ್ಪನೆಯ ಆದರ್ಶಸಮಾಜವಾಗಿರಲಿಲ್ಲ. ಇದರ ಸಂಖ್ಯೆಯು ದೊಡ್ಡದಾಗುತ್ತಾ ಹೋದಂತೆ ಈ ಸಂಪನ್ಮೂಲಗಳನ್ನು ಹಂಚಿಕೊಡುವ ಕೆಲಸವು ಬಹಳ ತ್ರಾಸದಾಯಕವಾಗಿತ್ತು. ಅದರಲ್ಲೂ ವಿಧವೆಯರಿಗೆ ನಿತ್ಯದ ಆಹಾರ ಒದಗಿಸುವುದರಲ್ಲಿ ಮನಸ್ತಾಪಗಳಾದವು (ಅ.ಕೃ. 6:1ನ್ನು ನೋಡಿರಿ).

ಶಿಷ್ಯರು ಈ ಸಮುದಾಯವನ್ನು ನಡೆಸುವ ನಾಯಕರಾಗಿದ್ದು ಸುವಾರ್ತೆ ಸಾರುವ ಕೆಲಸಕ್ಕೆ ಹೆಚ್ಚಿನ ಗಮನ ಹರಿಸಬೇಕಾಗಿತ್ತು. ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲು ಅವರಿಗೆ ಈ ವ್ಯವಸ್ಥೆಯನ್ನು ಪುನರ್ ಕ್ರಮಪಡಿಸುವ ಅಗತ್ಯ ಉಂಟಾಯ್ತು.

ಸಭೆಯ ವ್ಯವಹಾರವನ್ನು ನಿರ್ವಹಿಸಲು ಆತ್ಮಭರಿತರಾದ ಏಳು ಜನರನ್ನು ಆರಿಸಿಕೊಂಡರು. ಬಹುಶಃ ಇದು ಸಭೆಯಲ್ಲಿ ವಿವಿಧ ಸೇವೆಗಳ ಅಗತ್ಯವನ್ನು ಕಂಡುಕೊಂಡ ಪ್ರಥಮ ಸಂದರ್ಭವಾಗಿದೆ. ಇದೇ ಸಮಯದಲ್ಲಿ ಸಭೆಯು ಸುವಾರ್ತೆಯ ಸಾರುತ್ತಾ ಸಾಕ್ಷಿ ಜೀವಿತವನ್ನು ನಡೆಸಬೇಕಾಗಿತ್ತು. ಮೋಶೆ ಮತ್ತು ದಾವೀದರ ಕಾಲದಲ್ಲಿ ಆಡಳಿತಗಾರರಿಗೆ ಮಾರ್ಗದರ್ಶನ ಮಾಡಿದ ಕರುಣೆ ಮತ್ತು ನ್ಯಾಯದ ನೇಮಗಳನ್ನು ಈಗಲೂ ಹೊಸದಾಗಿ ಕ್ರಮಪಡಿಸಲಾದ ಸಭೆಯು ಪಾಲಿಸಿಕೊಂಡು ಸುವಾರ್ತಾ ಸೇವೆಯನ್ನು ಮಾಡಬೇಕಾಗಿತ್ತು. ಎಲೆನ್ ಜಿ ವೈಟಮ್ಮನವರ "ದಿ ಆಕ್ಟ್ಸ್ ಆಫ್ ಅಪೋಸ್ತಲ್ಸ್" ಪುಸ್ತಕದ ಪುಟ 95.

ಆದಿಸಭೆಯ ಹೇಗಿತ್ತೆಂಬುದನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳಿರಿ. ನಾವು ಅದೇ ನೇಮಗಳನ್ನು ಇಂದಿಗೂ ಸಹಾ ಹೇಗೆ ಪ್ರತಿಬಿಂಬಿಸಬಹುದು?

**ಸೋಮವಾರ** **ಆಗಸ್ಟ್ 26**

## ದೋರ್ಕಳ ಸೇವೆ ಮತ್ತು ಸಾಕ್ಷಿ

ಯೇಸುಕ್ರಿಸ್ತನು ಮುಂತಿಳಿಸಿದಂತೆ ಯೆರೂಸಲೇಮಿನಲ್ಲಿ ಯೂದಾಯ ಸಮಾರ್ಯ ಸೀಮೆಗಳಲ್ಲಿ ಸಭೆಯು ಬೆಳೆಯುತ್ತಾ ಹೋದಂತೆ (ಅ.ಕೃ. 1:8). ಹೊಸ ವಿಶ್ವಾಸಿಗಳು ನಂಬಿಕೆಯನ್ನು ಕ್ರಿಸ್ತನ ಸೇವೆಯನ್ನು ಕೈಗೆತ್ತಿಕೊಂಡರು. ಅವರುಗಳಲ್ಲಿ ಯೊಪ್ಪಪಟ್ಟಣದ ತಬಿಥಾ ಎಂಬ ಹೆಸರುಳ್ಳ ದೋರ್ಕ ಒಬ್ಬಳು.

ಆಕೆಯು ಯೇಸುಕ್ರಿಸ್ತನ ಸೂಚನೆಗಳನ್ನು (ಬೋಧನೆ) ಗಂಭೀರವಾಗಿ ತೆಗೆದುಕೊಂಡು ಬಟ್ಟೆ ಇಲ್ಲದೆವರಿಗೆ ಬಟ್ಟೆಯನ್ನು ಒದಗಿಸುತ್ತಿದ್ದಳು. ದೊರ್ಕಳ ಬಗ್ಗೆ ಮತ್ತು ಆಕೆಯ ಸುವಾರ್ತಾ ಸೇವೆಯ ಬಗ್ಗೆ ಅ.ಕೃ 9:36ನ್ನು ಓದಿರಿ. ಹಾಗೆಯೇ ನಿಮ್ಮ ಜೀವಿತವೂ ಸೇವೆಯೂ ಅದೇ ಪ್ರಕಾರವಾಗಿ ವಿವರಿಸಲ್ಪಡುತ್ತಿತ್ತು? ನೀವು ನಿಮ್ಮ ಜೀವಿತವು ಹೇಗೆ ವಿವರಿಸಲ್ಪಡಬೇಕೆಂದು ಬಯಸುತ್ತೀರಿ?

ದೊರ್ಕಳ ಸೇವೆಯು ಹೇಗಿತ್ತೆಂದರೆ ಆಕೆಯನ್ನು ಶಿಷ್ಯಳೆಂದು ವಿವರಿಸಲ್ಪಡುವಂತೆ ಇತ್ತು. ಆಕೆಯ ನಂಬಿಗಸ್ತಿಕೆ, ಬಲ ಇತರರನ್ನು ಗಮನಿಸುವಿಕೆಯು ಆಕೆಯನ್ನು ಅವಳ ಪಟ್ಟಣದಿಂದಾಚೆಗೂ ಹೆಸರುವಾಸಿಯಾಗಿ ಮಾಡಿದ್ದವು.

ಪೇತ್ರನು ಹತ್ತಿರ ಪಟ್ಟಣಗಳಾದ ಲೂದ್ಯ, ಯೊಪ್ಪದ ಜನರನ್ನು ಸಂಧಿಸುತ್ತಿರುವಾಗ ದೊರ್ಕಳ ಅಕಾಲಿಕ ಮರಣದ ಸಂಬಂಧದಲ್ಲಿ ಅಲ್ಲಿಗೆ ಬರುವಂತೆ ಕರೆಯಲಾಯ್ತು (ಅ.ಕೃ. 9:37–41). ಪೇತ್ರನು ಯೊಪ್ಪವನ್ನು ತಲುಪಿದಾಗ ದೊರ್ಕಳಿಂದ ಸಹಾಯ ಪಡೆದ ಅನೇಕ ಬಡವರು ಅವನನ್ನು ಸಂಧಿಸಿದರು. ಅವಳು ಅವರಿಗೆ ಕೊಟ್ಟಿದ್ದ ಬಟ್ಟೆಗಳನ್ನು ಪೇತ್ರನಿಗೆ ತೋರಿಸಿ ಅವಳ ಬಗ್ಗೆ ಹೇಳುತ್ತಿದ್ದರು.

ಪೇತ್ರನು ಅವಳಿಗೋಸ್ಕರ ಪ್ರಾರ್ಥಿಸಿದಾಗ ದೇವರು ಅವಳ ಜೀವವನ್ನು ಹಿಂದಿರುಗಿಸಿದನು. ಜನರ ಸೇವೆಗಾಗಿ ಮುಡಿಪಾಗಿದ್ದ ಅವಳ ಜೀವ ಸದಾಕಾಲಕ್ಕೂ ಇರುತ್ತದೆ ಹೇಳಲು ಸಾಧ್ಯವಿಲ್ಲ. ದೊರ್ಕಳು ರೋಗವನ್ನು ಸಾವನ್ನು ಅನುಭವಿಸಿದ್ದಳು. ವಿಧವೆಯನ್ನು ಪರಾಂಬರಿಸಲು ಸಭಾಸೇವಕನಾಗಿ ಆರಿಸಲ್ಪಟ್ಟಿದ್ದ ಸ್ತೆಫನನು ಕೊಲ್ಲಲ್ಪಟ್ಟು ಪ್ರಥಮ ರಕ್ತಸಾಕ್ಷಿಯಾದನು (ಅ.ಕೃ. 7:54–60ನ್ನು ನೋಡಿರಿ).

ಸೇವೆಯು ಪಥವು ಸುಕ್ಷೇಮವಾದ ಪಥವೇನಲ್ಲ, ಅನೇಕ ಸಲ ಅಸಹಾಯಕರವಾಗಿರುತ್ತದೆ.

ದೇವರು ತನ್ನ ಪ್ರೀತಿ ಮತ್ತು ಬಲವನ್ನು ದೊರ್ಕಳ ಜೀವಿತ ಮತ್ತು ಮರಣದಲ್ಲಿ ಉಪಯೋಗಿಸಿದನು. ಯೊಪ್ಪದ ಜನರಿಗೆ ಈ ವಿಷಯವು ತಿಳಿದಾಗ ಅನೇಕರು ಕ್ರಿಸ್ತನನ್ನು ನಂಬುವವರಾದರು (ಅ.ಕೃ. 9:42). ನಾವೇನಾದರು ಸತ್ತುಹೋದರೆ

ನಮ್ಮ ಕೊಡುಗೆಯು ದೊರ್ಕಳು ಸತ್ತಾಗ ಅವಳ ಕೊಡುಗೆಯಿಂದ ಜನರು ಮರುಗಿದಂತೆ ನಮ್ಮ ವಿಷಯದಲ್ಲಿ ಮರುಗುವಂತೆ ಆಗುತ್ತದೆಯೇ? ನಾವು ಹೇಗೆ ಸೇವೆಯ ಪರಂಪರೆಯನ್ನು ಬಿಟ್ಟು ಹೋಗಬಹುದು.

ದೊರ್ಕಳಿಗೆ ಉಡುಪುಗಳನ್ನು ಸಿದ್ಧಪಡಿಸುವ ಕೌಶಲ್ಯವಿದ್ದಂತೆ ಜನರ ಸೇವೆ ಮಾಡುವಂತಹ ಯಾವ ಕೌಶಲ್ಯಗಳು ನಮ್ಮಲ್ಲಿವೆ?

**ಮಂಗಳವಾರ** **ಆಗಸ್ಟ್ 27**

## ಹಂಚುವಂತಹ ಕೊಡುವಿಕೆ

ಹಂಚಿಕೊಡುವ –ಕೊಡುವುದು ಅಪೋಸ್ತಲನಾದ ಪೌಲನು ತಾನು ಪರಿವರ್ತನೆಗೊಂಡ ನಂತರ ಅನ್ಯರಿಗೆ ಸುವಾರ್ತೆಯನ್ನು ಒಯ್ಯುವ ಧರ್ಮ ಕಾರ್ಯವನ್ನು ಕೈಗೆತ್ತಿಕೊಂಡನು. ಯೆಹೂದ್ಯ ಕ್ರೈಸ್ತರಿಗೂ ಅನ್ಯಕ್ರೈಸ್ತರಿಗೂ ಇರುವ ಸಂಬಂಧದ ವಿಷಯದಲ್ಲಿ ಅನೇಕ ಪ್ರಶ್ನೆಗಳು ಇವನ ಸೇವೆಯ ಯಶಸ್ಸಿನ ನಿಮಿತ್ತ ಎದ್ದವು. ಯೆಹೂದ್ಯ ಮತ್ತು ಅನ್ಯಕ್ರೈಸ್ತ ನಾಯಕರುಗಳ ಒಕ್ಕೂಟವು ಯೆರೂಸಲೇಮಿನಲ್ಲಿ ಸಮಾವೇಶಗೊಂಡು ದೇವರ ಮಾರ್ಗದರ್ಶನದಿಂದ ಜಟಿಲವಾದ ಪ್ರಶ್ನೆಗಳನು ಚರ್ಚಿಸಿದರು. ಈ ಸಮಾವೇಶದ ಫಲಿತಾಂಶಗಳು ಅ.ಕೃ. 15ರಲ್ಲಿ ದಾಖಲಾಗಿದೆ.

ಪೌಲನು ಸಭೆಯಾಗಿ ಸೇರಿ ಚರ್ಚಿಸಿದ ವಿಷಯು ಗಲಾತ್ಯ 2ನೇ ಅಧ್ಯಾಯದಲ್ಲಿದೆ. ಆತನು ಯೆರೂಸಲೇಮಿನ ಸಭೆ ತೆಗೆದುಕೊಂಡ ತೀರ್ಮಾನಕ್ಕೆ ಮತ್ತೊಂದು ಮುಖ್ಯವಾದ ವಿಷಯವನ್ನು ಇಲ್ಲಿ ಸೇರಿಸಿ ಹೇಳುತ್ತಾನೆ. ಆದರೆ ನೀವು ನಮ್ಮಲ್ಲಿರುವ ಬಡವರನ್ನು ಜ್ಞಾಪಕ ಮಾಡಿಕೊಳ್ಳಬೇಕೆಂಬ ಒಂದೇ ಸಂಗತಿಯನ್ನು ಬೇಡಿಕೊಂಡರು ಇದನ್ನು ಮಾಡುವುದರಲ್ಲಿ ನಾನೂ ಆಸಕ್ತನಾಗಿದ್ದೆನು (ಗಲಾತ್ಯ 2:10).

ಪೌಲನು ಇದನ್ನು ಸುವಾರ್ತೆ ಸೇವೆಯಾದ್ಯಂತ ವೈಯಕ್ತಿಕವಾಗಿ ಮುಂದುವರೆಸಿಕೊಂಡು ಹೋಗಲು ನಿಶ್ಚಯಿಸಿದನು (ಉದಾಹರಣೆಗೆ ನೋಡಿರಿ ಅ.ಕೃ. 20:35).

ಯೆರೂಸಲೇಮಿನ ಮೊದಲ ಸಭೆಯಲ್ಲಿದ್ದಂತೆ ಕ್ರೈಸ್ತ ವಿಶ್ವಾಸಿಗಳು ಸಮಸ್ತ ಸಮುದಾಯವನ್ನೇ ಆಲಂಗಿಸುವ ಕನಸನ್ನು ವಿಸ್ತರಿಸಿದನು.

ಓದಿರಿ : 2 ಕೊರಿಂಥ 8:7–15. ಹೇಗೆ ಪೌಲನು ಸುವಾರ್ತೆಯನ್ನು ಉದಾರವಾಗಿ ಕೊಡುವುದರ ಜೊತೆಗೆ ಸಂಬಂಧಪಡಿಸುತ್ತಾನೆ?

ಕಷ್ಟದ ಸಂದರ್ಭಗಳಲ್ಲಿ ತಮ್ಮ ಸಹವಿಶ್ವಾಸಿಗಳ ಕೊರತೆಗಳನ್ನು ನೀಗಿಸುವ ಹಳೆ ಒಡಂಬಡಿಕೆಯು ಎರಡು ನಿದರ್ಶನಗಳನ್ನು ಪೌಲನು ಇಲ್ಲಿ ಉದಾಹರಿಸುತ್ತಾನೆ. ದೇವರು ಇಸ್ರಾಯೇಲ್ಯರಿಗೆ ಅರಣ್ಯದಲ್ಲಿ ಅವರ ಆಹಾರಕ್ಕೆ ಮನ್ನವನ್ನು ಕೊಟ್ಟಿದ್ದನ್ನು ಇಲ್ಲಿ ಪ್ರಸ್ತಾಪಿಸುತ್ತಾನೆ. ಇಸ್ರಾಯೇಲ್ಯರು ಅಗತ್ಯಕ್ಕೆ ತಕ್ಕಷ್ಟು ಮನ್ನವನ್ನು ಕೂಡಿಸಿಕೊಳ್ಳಬೇಕಾಗಿತ್ತು (2 ಕೊರಿಂಥ 8:15). ಇಲ್ಲಿ ಪೌಲನು ಕೀರ್ತನೆ ಪುಸ್ತಕದಿಂದಲೂ ಉದಾಹರಿಸುತ್ತಾನೆ (ಕೀರ್ತ 112:9). "ಅವನು ಬಡವರಿಗೆ ಧಾರಾಳವಾಗಿ ಕೊಟ್ಟನು, ಅವನ ನೀತಿಯ ಫಲವು ಸದಾಕಾಲವು ಇರುವುದು" (2 ಕೊರಿಂಥ 9:9).

ಪೌಲನು ಯೆರೂಸಲೇಮಿನಲ್ಲಿರುವ ಬಡವರಿಗೋಸ್ಕರ ಕ್ರಮವಾಗಿ ತಮ್ಮ ಆದಾಯದಲ್ಲಿಂದ ಪ್ರತ್ಯೇಕವಾಗಿ ಎತ್ತಿಡುವಂತೆ ತನ್ನ ಪತ್ರಿಕೆಯಲ್ಲಿ ಓದುಗರಿಗೆ ತಿಳಿಸಿದ್ದಾನೆ.

ಒಂದು ಸಭೆಯ ಉದಾರತೆಯನ್ನು ಮತ್ತೊಂದು ಸಭೆಯಲ್ಲಿ ಎತ್ತಿ ಹೇಳುತ್ತಾ ಬಡವರಿಗೋಸ್ಕರ ಹಣ ಸಂಗ್ರಹಿಸುತ್ತಾನೆ. "ಈ ಸಹಾಯದಿಂದ ತೋರಿಬಂದ ಯೋಗ್ಯಭಾವವನ್ನು ಅವರು ನೋಡುವಾಗ ನೀವು ಮಾಡಿದ್ದ ಪ್ರತಿಜ್ಞೆಗೆ ಸರಿಯಾಗಿ ನೀವು ಉದಾರವಾಗಿ ಸಹಾಯ ಮಾಡಿದ್ದರಿಂದಲೂ ದೇವರನ್ನು ಕೊಂಡಾಡುವರು" (2 ಕೊರಿಂಥ 9:13).

ಪ್ರತಿ ಕಾರಣಗಳಿಗೂ ಕೊರತೆಗಳಿಗೂ ನಾವು ಹಣಸಹಾಯ ಮಾಡಲು ಶಕ್ತರಾಗಿಲ್ಲದಿದ್ದಾಗ ಕೊಡುವುದರಲ್ಲಿ ಆದ್ಯತೆಯನ್ನು ಮಾಡುವುದು ಹೇಗೆ?

**ಬುಧವಾರ** **ಆಗಸ್ಟ್ 28**

## ಚೆನ್ನಾಗಿ ಬಾಳುವುದಕ್ಕೂ ಪ್ರೀತಿಸಿವುದಕ್ಕೂ ಪೌಲನ ಮಾರ್ಗದರ್ಶನ

ರೋಮಾಪುರದವರಿಗೆ ಪೌಲನು ಬರೆದ ಪತ್ರಿಕೆಯು ರಕ್ಷಣೆಯು ಕ್ರಿಸ್ತನ ಮರಣದ ಮೂಲಕವಾಗಿ ನಂಬಿಕೆಯಿಂದಲೇ ಸಿಗುತ್ತದೆ ಎಂಬುದಕ್ಕೆ ಆಳವಾದ ವಿವರಣೆಯನ್ನು ಕೊಡುತ್ತದೆ. ಆದರೆ 11ನೇ ಅಧ್ಯಾಯದ ನಂತರ ಅದು

ಬೇರೆಯದಕ್ಕೆ ಒತ್ತುಕೊಡುತ್ತದೆ. ಪೌಲನು ಚೆನ್ನಾಗಿ ಬಾಳುವುದಕ್ಕೂ ಪ್ರೀತಿಸುವುದಕ್ಕೂ ಅಗತ್ಯವಾದ ಮಾರ್ಗದರ್ಶನವನ್ನು ನೀಡುತ್ತಾನೆ. ದೇವರ ಕೃಪೆ ಮತ್ತು ಪ್ರೀತಿಯು ಕ್ರಿಸ್ತನಲ್ಲಿ ತೋರಿ ಬಂದುದನ್ನು ಆಧಾರಪಡಿಸುತ್ತಾನೆ.

"ಆದುದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯೂ ಆಗಿರುವ ಸಜೀವ ಯಜ್ಞವನ್ನಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು (ರೋಮ 12:1). ದೇವರು ಕ್ರಿಸ್ತನ ಮೂಲಕ ನಮಗೆ ಏನನ್ನು ಮಾಡಿದ್ದಾನೋ ಅದಕ್ಕಾಗಿ ನಾವು ಹೀಗೆಯೇ ಜೀವಿಸಬೇಕು ಎಂದು ಹೇಳುತ್ತಾನೆ.

ರೋಮಪುರದವರ ಪತ್ರಿಕೆ 12ನೇ ಅಧ್ಯಾಯವನ್ನು ಓದಿ ಸಾರಾಂಶವನ್ನು ತಿಳಿಯಿರಿ. ಇದರಲ್ಲಿ ಇನ್ನೊಬ್ಬರನ್ನು ವಿಶೇಷವಾಗಿ ಕೊರತೆಯಲ್ಲಿರುವವರನ್ನು ಪರಾಂಬರಿಸಿ ಪ್ರೀತಿಸಬೇಕು ಎಂದು ಹೇಳುವುದನ್ನು ಗಮನಿಸಿ.

ಪೌಲನು ತನ್ನ ಇತರ ಪತ್ರಿಕೆಗಳಲ್ಲಿ ವಿವರವಾಗಿ ಹೇಳಿರುವ ವಿಷಯಗಳ ಸಾರಾಂಶವು ರೋಮ 12ನೇ ಅಧ್ಯಾಯವಾಗಿದೆ. ಆತನು ಸಭೆಯಲ್ಲಿರುವ ನಾನಾ ವರಗಳು ಮತ್ತು ಪಾತ್ರಗಳ ಬಗ್ಗೆ ಮಾತಾಡುತ್ತಾನೆ. ಇದು ಸುವಾರ್ತಾ ಸೇವೆ, ಪ್ರೋತ್ಸಾಹ ಮತ್ತು ಇತರರಿಗೆ ಉದಾರವಾಗಿ ಕೊಡುವುದನು ಒಳಗೊಂಡಿದೆ (ನೋಡಿರಿ 12:3–8). ಇವುಗಳನ್ನು ಪಾಲಿಸುವುದು ಮಾತ್ರವಲ್ಲ ಉತ್ಸಾಹದಿಂದಲೂ ಪ್ರೀತಿಯಿಂದಲೂ ಮಾಡಬೇಕೆಂದು ತಿಳಿಸುತ್ತಾನೆ (ರೋಮ 12:9–11).

ಪೌಲನು ವ್ಯವಹಾರಿಕ ಪದಗಳಲ್ಲಿ ಎಂತಹ ಜೀವಿತದ ಬಗ್ಗೆ ಎಂದು ವಿವರಿಸುತ್ತಾನೆ. ನಂಬಿಗಸ್ತರಾದವರು ಕಷ್ಟಗಳಲ್ಲಿ ಹಿಂಸೆಗಳಲ್ಲಿ ತಾಳ್ಮೆಯುಳ್ಳವರಾಗಿದ್ದು ಸಾಧ್ಯವಾದ ಕಡೆಗಳಲ್ಲೆಲ್ಲಾ, ಸಾಧ್ಯವಾದ ಸಮಯಗಳಲ್ಲಿ ಬಡವರನ್ನು ಪಾರಮರಿಸಿ ಸಮಾಧಾನವಾಗಿರಬೇಕು ಎಂದು ಹೇಳುತ್ತಾನೆ. "ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು" (ರೋಮಾಪುರ 12:21).

ಈ ಅಧ್ಯಾಯವು ಹೊಸ ವ್ಯಕ್ತಿಯಾಗಿ ಜೀವಿಸುವುದನ್ನು ವೈಯಕ್ತಿಕವಾಗಿ ಮತ್ತು ಸಮುದಾಯ ಭಾಗವಾಗಿ ದೇವರನ್ನು ಸೇವೆ ಮಾಡುವುದನ್ನು ಸ್ಥೂಲವಾಗಿ

ವಿವರಿಸುತ್ತದೆ.

ಯೇಸುವು ಶಿಲುಬೆಯ ಮರಣದಿಂದ ತಮಗೆ ಏನು ಮಾಡಿದ್ದಾನೆಂದು ನೆನಪಿಸಿ ಹೊಸ ಅನುಯಾಯಿಗಳು ತಮ್ಮ ಜೀವಿತಗಳನ್ನೂ ಆದ್ಯತೆಗಳನ್ನು ಮತ್ತು ಕ್ರಿಯೆಗಳನ್ನು ಬದಲಾಯಿಸಿಕೊಳ್ಳಬೇಕೆಂದು ಪೌಲನು ಹೇಳುತ್ತಾನೆ.

ರೋಮ ಸಾಮ್ರಾಜ್ಯದ ಶೋಷಣೆ ಮತ್ತು ಸಮಾಜದ ಕ್ರೂರತೆಯಲ್ಲಿ ಜೀವಿಸುತ್ತಿರುವವರಿಗೆ "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ಪರಲೋಕ ಭಾವದವರಾಗಿರಿ" (ರೋಮ 12:2) ಎಂದು ಹೇಳುತ್ತಾನೆ.

ಇಂದು ಯೇಸುಕ್ರಿಸ್ತನ ಅನುಯಾಯಿಯೂ ಪ್ರೀತಿಯಿಂದ ಜೀವಿಸಲು ಯಾವ ಧೋರಣೆಗಳನ್ನು ಮತ್ತು ಅಭ್ಯಾಸಗಳನ್ನು ಸಮುದಾಯದಲ್ಲಿ ವಿರೋಧಿಸಬೇಕು?

**ಗುರುವಾರ** **ಆಗಸ್ಟ್ 29**

## ಯಾಕೋಬನು "ನೀತಿವಂತನು"

ಯೆರೂಸಲೇಮಿನಲ್ಲಿ ಒಕ್ಕೂಟದ ಅಧ್ಯಕ್ಷನಾಗಿ ತೀರ್ಮಾನಗಳನ್ನು ಕೊಟ್ಟವನು. ಯೇಸುಕ್ರಿಸ್ತನ ಸೋದರನಾದ ಅಥವಾ ಮಲಸೋದರನಾದ ಯಾಕೋಬನು (ಅ.ಕೃ. 15 ಮತ್ತು ಗಲಾತ್ಯ 1 ಮತ್ತು 2ನ್ನು ನೋಡಿರಿ). ಇವನು ಸತ್ಯವೇದದಲ್ಲಿ ಅಡಕವಾಗಿರುವ ಯಾಕೋಬನು ಬರೆದ ಪತ್ರಿಕೆಯು" ಬರಹಗಾರನಾಗಿದ್ದಾನೆ.

ಈ ಎರಡೂ ಸಂದರ್ಭಗಳಲ್ಲಿ ಬರುವ ವ್ಯಕ್ತಿ ಅದೇ ಯಾಕೋಬನಾಗಿದ್ದರೆ ಸಭೆಯ ನಾಯಕನಾಗಿದ್ದು, "ನೀತಿವಂತ"ನೆಂದು ಕರೆಸಿಕೊಂಡವನು ಈತನೇ ಆಗಿದ್ದಾನೆ. ಈತನು ಬುದ್ಧಿವಂತನಾದ ನಾಯಕನಾಗಿ ಮತ್ತೊಬ್ಬರನ್ನು ಬಡ ಅಂದರೆ ಬಡವರನ್ನು ತುಳಿತಕ್ಕೊಳಗಾದವರನ್ನು ಪರಾಂಬರಿಸುವುದಕ್ಕೆ ಆದ್ಯತೆ ನೀಡಿದವನು ಆಗಿದ್ದಾನೆ. ಆತನ ಹೆಸರನ್ನು ಹೊಂದಿರುವ ಪುಸ್ತಕವು ಹೊಸ ಒಡಂಬಡಿಕೆಯ 'ಜ್ಞಾನೋಕ್ತಿ'ಗಳೆಂಬುದಾಗಿ ವರ್ಣಿಸಲ್ಪಟ್ಟಿದೆ. ಇದು ಭಯಭಕ್ತಿಯುಳ್ಳವರಾಗಿ ಬುದ್ಧಿವಂತಿಕೆಯಿಂದ ದೇವರನ್ನು ಅನುಸರಿಸುವುದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತದೆ.

ಯಾಕೋಬನ ಪುಸ್ತಕದ ಬರಹಗಾರ ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ಸೇವೆ ಮೋಸಗೊಳಿಸಬೇಡಿರಿ

ಎಂದು ಆತಂಕದಾದ ಕ್ರೈಸ್ತ ಓದುಗರಿಗೆ ಜ್ಞಾಪಕಪಡಿಸುತ್ತಾನೆ ಮತ್ತು ಎಂತಹ ಧರ್ಮವು ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುತ್ತದೆ ಎಂತಲೂ ಹೇಳುತ್ತಾನೆ (ಯಾಕೋಬ 1:27).

ಯಾಕೋಬ 2:1–9 ಮತ್ತು 5:1–5ನ್ನು ಓದಿರಿ. ಸಮಾಜದಲ್ಲಿ ಸಾಮಾನ್ಯರಿಗಿಂತ ಭಿನ್ನವಾದ ಶ್ರೀಮಂತರ ಬಗ್ಗೆ ಯಾವ ಧೋರಣೆ ಹೊಂದಿದ್ದಾನೆ? ಸಭೆಯಲ್ಲಿ ಬಡವರನ್ನೂ ಶ್ರೀಮಂತರನ್ನು ಹೇಗೆ ಪರಿಗಣಿಸಬೇಕು ಎಂಬುದಕ್ಕೆ ಯಾವ ಬೋಧನೆಗಳನ್ನು ಮಾಡುತ್ತಾನೆ?

ಯಾವನಾದರೂ ಕೊರತೆಯಲ್ಲಿ ಬಿದ್ದಿದ್ದಾಗ ನಾವು ಆತನಿಗೆ ಒಳ್ಳೆಯದಾಗಲಿ ದೇವರ ಆಶೀರ್ವಾದಗಳ ಲಭಿಸಲಿ ಎಂದು ಬಯಸಿದರೆ ಸಾಕಾಗುವುದಿಲ್ಲ. ಕೇವಲ ಭಾವುಕತೆಯನ್ನು ಪ್ರದರ್ಶಿಸುವವರಾಗಿರದೆ ನಿಜವಾಗಿಯು ಆಹಾರ ಮತ್ತು ಬಟ್ಟೆಯನ್ನು ಕೊಡುವುದು ಉಪಯುಕ್ತವಾದದೆಂದು ಹೇಳುತ್ತಾನೆ (ಯಾಕೋಬ 2:14–16).

ಯಾಕೋಬನು ನಂಬಿಕೆಗೂ ಕ್ರಿಯೆಗೂ ಇರುವ ಸಂಬಂಧವನ್ನು ಈ ಉದಾಹರಣೆಯಲ್ಲಿ ತಿಳಿಸುತ್ತಾನೆ. ಯೇಸುಕ್ರಿಸ್ತನ ಬೋಧನೆಯನ್ನು ತಿರುಗಿ ಬರೆಯುತ್ತಾನೆ. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕೆಂಬುದನ್ನು ರಾಜಾಜ್ಞೆಯೆಂದು ಕರೆಯುತ್ತಾನೆ. ರಕ್ಷಣೆಯನ್ನು ಹೊಂದಲು ನಮ್ಮ ಕ್ರಿಯೆಗಳು ಅಗತ್ಯವಿಲ್ಲ. ಆದರೆ ನಿಜವಾದ ನಂಬಿಕೆಯನ್ನು ತೋರಿಸಲು ನಮ್ಮ ಕ್ರಿಯೆಗಳು ಬೇಕೆಂದು ತಿಳಿಸುತ್ತಾನೆ (ಯಾಕೋಬ 2:8).

ನಾವು ನಮ್ಮ ಉಪಪ್ರಜ್ಞೆಯಲ್ಲಿರುವಾಗಲೂ ಬಡತನಕ್ಕಿಂತ ಸಿರಿವಂತಿಕೆಗೆ ಆದ್ಯತೆಯನ್ನು ಕೊಡುವುದು ಬಹಳ ಸುಲಭವೇಕೆ?

**ಶುಕ್ರವಾರ** **ಆಗಸ್ಟ್ 30**

**ಹೆಚ್ಚಿನ ಚಿಂತನೆಗಳು :** ಎಲೆನ್ ಜಿ ವೈಟ್‌ರವರ "Dorcas- Her Ministry and Its Influence" ಪುಟ 66, 67ನ್ನು "In Welfare Ministry / A Liberal Church" PP 335-345, In the Act of Apostels / "This is Pure religion" PP 35-41. Welfare ministry ಯಲ್ಲಿ ರಕ್ಷಕನು

ದುಃಖಿತರನ್ನು ಶೋಧಿತ ಆತ್ಮಗಳನ್ನು ಪರಾಮರಿಸುವ ಸಾಮರ್ಥ್ಯವುಳ್ಳ ಸಭೆಯ ಸ್ಥಾಪನೆಗಾಗಿ ತನ್ನ ಅಮೂಲ್ಯವಾದ ಪ್ರಾಣವನ್ನು ತೆತ್ತಿದ್ದಾನೆ. ವಿಶ್ವಾಸಿಗಳ ಒಂದು ಗುಂಪು ಬಡವರು, ಅವಿದ್ಯಾವಂತರು ಮತ್ತು ಹೆಸರು ಪಡೆದಿಲ್ಲದವರು ಆಗಿರಬಹುದು. ಆದಾಗ್ಯೂ ಅವರು ಮನೆಗಳಲ್ಲಿ, ನೆರೆಹೊರೆಯಲ್ಲಿ ಸಭೆಗಳಲ್ಲಿ ತಲುಪಲಾಗದ ಪ್ರದೇಶಗಳಲ್ಲಿ ಕ್ರಿಸ್ತನಲ್ಲಿ ಕೆಲಸ ಮಾಡಬಲ್ಲವರಾಗಿರುತ್ತಾರೆ. ಅದರ ಫಲಿತಾಂಶವು ನಿತ್ಯತ್ವವನ್ನೇ ತಲುಪುವಷ್ಟು ದೂರ ಸಾಗುತ್ತದೆ. ಎಲೆನ್ ಜಿ ವೈಟಮನವರ "ದಿ ಡಿಸೈರ್ ಆಫ್ ಏಜಸ್" ಪುಸ್ತಕದ ಪುಟ 640.

"ನಿಸ್ವಾರ್ಥವಾದ ಕಾರ್ಯ (ಉದಾರತೆ) ಆದಿಸಭೆಯನ್ನು ಆನಂದದಲ್ಲಿ ಪರವಶವನ್ನಾಗಿಸಿತು. ಯಾಕೆಂದರೆ ಅಂಧಕಾರದಲ್ಲಿರುವ ಆತ್ಮಗಳಿಗೆ ಸುವಾರ್ತೆಯು ಮುಟ್ಟುತ್ತದೆ ಎಂಬುದನ್ನು ವಿಶ್ವಾಸಿಗಳು ಅರಿತಿದ್ದರು. ಕೃಪೆಯನ್ನು ಹೊಂದಿಕೊಂಡಿದ್ದು ಅವರಿಗೆ ವ್ಯರ್ಥವಾಗಲಿಲ್ಲವೆಂದು ಅವರ ಉಪಕಾರಶೀಲತೆ ಸಾಕ್ಷ್ಯ ಕೊಡುತ್ತದೆ. ಅಂತಹ ಔದಾರ್ಯವನ್ನು ಉಂಟು ಮಾಡಲು ಪವಿತ್ರಾತ್ಮನ ಹೊರತು ಬೇರೆ ಯಾವುದರಿಂದ ಮಾಡಲು ಸಾಧ್ಯ?

ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಕಣ್ಣುಗಳಿಗೆ ಅದು ಕೃಪೆಯ ಅದ್ಭುತವಾಗಿರುತ್ತದೆ–ಎಲೆನ್ ಜಿ ವೈಟಮ್ಮನವರ, ಆಕ್ಟ್ ಆಫ್ ಅಪೋಸ್ತಲ್ಸ್344.

## ಚರ್ಚಿಸುವ ಪ್ರಶ್ನೆಗಳು

1. ಅಪೋಸ್ತಲರ ಕೃತ್ಯಗಳು ಪುಸ್ತಕದ ಮೊದಲ ಕೆಲವು ಅಧ್ಯಾಯಗಳಲ್ಲಿ ವಿವರಿಸಲಾದ ಸಭೆಯಂತೆ ನಮ್ಮ ಸಭೆಯು ಆಗುವುದು ಹೇಗೆ? ಈ ದಿಶೆಯಲ್ಲಿ ಸಭೆಯ ನಾಯಕತ್ವವು ಯಾವ ವ್ಯವಹಾರಿಕ ಹೆಜ್ಜೆಗಳನ್ನು ಹಾಕುತ್ತದೆ?
2. ಈ ವಾರದ ಪಾಠದಲ್ಲಿ ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಾವು ಲೋಕದಾದ್ಯಂತ ಉಪಯೋಗಿಸುವ ತತ್ವಗಳ ವಿಷಯದಲ್ಲಿ ಚರ್ಚಿಸಿದೆವು. ದಶಾಂಶ ಮತ್ತು ಇತರೆ ಕಾಣಿಕೆಗಳು ಹೇಗೆ ಪ್ರಪಂಚದಾದ್ಯಂತ ಹಂಚಿಕೆಯಾಗುತ್ತದೆ ಎಂಬುದನ್ನು ಅರಿತೆವು. ಈ ಒಂದು ಪ್ರಪಂಚದಾದ್ಯಂತ ಹಂಚಿಕೆಯಾಗುವ ವ್ಯವಸ್ಥೆಯಿಂದ ಆಗುವ ಪ್ರಯೋಜನಗಳೇನು?

3. ರೋಮ 12ನೆ ಅಧ್ಯಾಯದಲ್ಲಿರುವ ಬೋಧನೆಗಳು ವಾಸ್ತವವಾಗಿ ಜೀವನದಲ್ಲಿ ಅನ್ವಯ ಮಾಡಿಕೊಳ್ಳಲು ಬರುತ್ತದೆಯೇ? ಅಥವಾ ಗಾಜಿನ ಕಿಟಕಿಗಳಿಗೆ ಅಂಟಿಸುವ ಆದರ್ಶಮಯವಾದ ಚಿತ್ರಗಳಂತೆ ಇರುತ್ತವೆಯೆ?
4. ಯಾಕೋಬ 5:1–5 ಕೊಟ್ಟಿರುವ ಎಚ್ಚರಿಕೆಯ ಹಳೆಯ ಒಡಂಬಡಿಕೆಯಲ್ಲಿ ಕೊಟ್ಟಿರುವ ಪ್ರವಾದಿಗಳ ಎಚ್ಚರಿಕೆಯಂತೆಯೇ ಕಠಿಣವಾದ ಭಾಷೆಯನ್ನು ಉಪಯೋಗಿಸಿದೆ. ಅಂತಹ ಬಲಿಯುತವಾದ ವ್ಯಕ್ತತೆ ಯಾಕೆ ಸಮರ್ಪಕವಾಗಿದೆ? ಅವಶ್ಯಕವಾಗಿದೆ?

**ಸಾರಾಂಶ :** ಕ್ರಿಸ್ತನ ಆಜ್ಞಾಪನೆ ಮತ್ತು ಪವಿತ್ರಾತ್ಮನ ಬಲದಿಂದ ಶಿಷ್ಯರು ಮತ್ತು ಮೊದಲ ವಿಶ್ವಾಸಿಗಳು ಹುರುಪುಗೊಂಡು ಸುವಾರ್ತಾ ಸಂದೇಶವನ್ನು ಕ್ರಿಸ್ತನ ಸೇವೆಯನ್ನು ಹಂಚಿಕೊಳ್ಳಲು ಸಾಧ್ಯವಾದಷ್ಟು ದೂರದೂರ ಪ್ರಯಾಣ ಮಾಡಿದರು. ಯೇಸುಕ್ರಿಸ್ತನ ಬೋಧನೆಗಳಿಂದ ಮತ್ತು ಯೆಹೂದ್ಯರ ಶಾಸ್ತ್ರಗಳಿಂದ ಆದಿಸಭೆಯು ಎಳೆಯಲ್ಪಟ್ಟು ಒಂದು ಹೊಸ ಸಮುದಾಯವಾಗಿ ಹೊರಹೊಮ್ಮಿತು. ವಿಶ್ವಾಸಿಗಳು ತಮ್ಮಲ್ಲಿರುವುದನ್ನು ತಮ್ಮ ಸಮುದಾಯದೊಳಗೂ ಹೊರಗೂ ಹಂಚಿದರು. ತಮ್ಮ ಉದಾಹರಣೆಗಳಿಂದಲೂ ತಮ್ಮ ಪತ್ರದಲ್ಲಿ ದಾಖಲಾಗಿರುವ ಬೋಧನೆಗಳಿಂದಲೂ ಮೊದಲ ಕ್ರೈಸ್ತನಾಯಕರು ವಿಶ್ವಾಸಿಗಳು ನಂಬಿಗಸ್ತ ಜೀವಿತದ ಜೀವಿಸುವುದಕ್ಕೆ ಅದರಲ್ಲೂ ಕೊರತೆಯಲ್ಲಿ ಬಿದ್ದಿರುವವರಿಗೆ ಸಹಾಯ ಮಾಡುವುದಕ್ಕೆ ಪ್ರಚೋದಿಸಿದರು.